ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಈ ರಾಷ್ಟ್ರದ ಕೃಷಿಗೆ ಮತ್ತು ಈ ರಾಷ್ಟ್ರದಲ್ಲಿ ಬಡವರಿಗೆ ಒದಗಿಸತಕ್ಕಂಥ ಕೆಲವು ಆಹಾರ ಪದಾರ್ಥಗಳಿರಬಹುದು, ಇಂತಹ ವಿಷಯದಲ್ಲಿ ಸಬ್ಸಿಡಿ ಕಾಪೊನೆಂಟ್ ಕೊಡುವಾಗ ಇವೊತ್ತು ಬಹಳ ಎಚ್ಚರಿಕೆ ವಹಿಸಿ ಪಾರ್ಲಿಮೆಂಟ್‌ನಲ್ಲಿ ನಿರ್ಣಯ ಮಾಡಬೇಕೆಂದು ಹೇಳಿದ್ದೇವೆ. ಅಷ್ಟೇ ಅಲ್ಲ, ಇವೊತ್ತು ಸೋಶಿಯಲ್ ಸೆಕ್ಟಾರ್ ಇರಬಹುದು, ಟೆಕ್ಸ್‌ಟೈಲ್ ಇರಬಹುದು, ಪ್ರತಿಯೊಂದರ ಬಗ್ಗೆಯೂ ಸವಿಸ್ತಾರವಾಗಿ ನಮ್ಮ ದೇಶದ ಪ್ರಗತಿಗೆ ಆತಂಕ ಬರಬಾರದೆಂದು ನಾವು ಸಲಹೆಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ. ಇನ್ನು ವಿದೇಶಿ ಬಂಡವಾಳ ಬರತಕ್ಕಂಥಾದ್ದರ ಬಗ್ಗೆ ಕೆಲವು ಸೆಕ್ಟಾರ್‌ಗಳಲ್ಲಿ ಬಳಕೆ ಮಾಡಿಕೊಳ್ಳುವುದಕ್ಕೆ ನಮ್ಮ ವಿರೋಧವೇನೂ ಇಲ್ಲವೆಂದು ಸ್ಪಷ್ಟಪಡಿಸಬಯಸುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ತಾವು ಇಸ್ರೇಲ್ ದೇಶಕ್ಕೆ ಭೇಟಿ ಕೊಟ್ಟು ಬಂದಿರುವ ಹಿನ್ನೆಲೆಯಲ್ಲಿ ರಾಜ್ಯದ ಕೃಷಿ ವಲಯಕ್ಕೇನಾದರೂ ನಿಶ್ಚಿತವಾದ ಲಾಭವಾಗಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ : ಇದರ ಬಗ್ಗೆ ಸವಿಸ್ತಾರವಾಗಿ ಹೇಳುವುದಕ್ಕೆ ಸಮಯದ ಅಭಾವವಿರುವುದರಿಂದ, ನಂತರ ತಿಳಿಸುತ್ತೇನೆ.

**ನಗರದ ವಿದ್ಯುತ್ ಚಿತಾಗಾರಗಳಿಂದ ಸಾರ್ವಜನಿಕರಿಗೆ ಉಂಟಾಗಿರುವ ಮಾಲಿನ್ಯದ ಸಮಸ್ಯೆ**

243 - ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಂಗಳೂರು ನಗರದಲ್ಲಿ ವಿದ್ಯುತ್ ಚಿತಾಗಾರಗಳಿಂದ ಸುತ್ತಮುತ್ತಲಿನ ನಿವಾಸಿಗಳು ಸಂಕಷ್ಟಕ್ಕೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಚಿತಾಗಾರಗಳನ್ನು ಬೆಂಗಳೂರಿನ ಹೊರವಲಯಕ್ಕೆ ವರ್ಗಾಯಿಸುವುದರ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?*

*ಇ) ಚಿತಾಗಾರದಿಂದ ಹೊರಬರುತ್ತಿರುವ ಹೊಗೆ, ವಾಸನೆ, ಇತ್ಯಾದಿಗಳನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಬೆಂಗಳೂರಿನಲ್ಲಿ 5 ಚಿತಾಗಾರಗಳಿವೆ. ದೂರುಗಳು ಬಂದಾಗ್ಗೆ ತಕ್ಕ ಪ್ರಾಧಿಕಾರವು ತೊಂದರೆಯಾಗದಂತೆ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.

ಆ) ಹೌದು. ಅವಶ್ಯಕತೆ ಕಂಡು ಬಂದಲ್ಲಿ.

ಇ) ವಿದ್ಯುತ್ ಚಿತಾಗಾರಗಳ ಹೊಗೆಕೊಳವೆಗಳ ಎತ್ತರವನ್ನು ಹೆಚ್ಚಿಸುವುದು ಸಾಂಪ್ರದಾಯಿಕ ಪದ್ಧತಿಯಾಗಿದ್ದು ಅದನ್ನು ಪ್ರಯತ್ನಿಸಲಾಗಿದೆ. ಇದೂ ಅಲ್ಲದೆ ವಿದ್ಯುತ್ ಚಿತಾಗಾರಗಳಿಂದ ಹೊರಸೂಸುವ ವಾಸನೆಯನ್ನು ನಿವಾರಿಸಲು ಆಯಿಲ್ ಫಿಲ್ಟರ್‌ಗಳನ್ನು ಪ್ರಯೋಗಿಕವಾಗಿ ಅಳವಡಿಸಲಾಗಿದೆ. ಈ ಪದ್ಧತಿಯು ಯಶಸ್ವಿಯಾದರೆ ಇದನ್ನು ಎಲ್ಲಾ ವಿದ್ಯುತ್ ಚಿತಾಗಾರಗೆಳಲ್ಲಿಯೂ ಅಳವಡಿಸಲಾಗುವುದು.

ಡಾ|| ಜೀವರಾಜ್ ಆಳ್ವ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ It is an officiaal document. There is a basic failure on the part of the Government. Without seeing it, you apporve. This is a tragic state.'ಹೌದು' ಅವಶ್ಯಕತೆ ಕಂಡು ಬಂದಲ್ಲಿ ಮತ್ತು 'ಸ್ವಾಮಿ' ಇಂತಹ ಉತ್ತರಗಳನ್ನು ಸರ್ಕಾರಿ ಕಾರ್ಯಕಲಾಪಗಳಲ್ಲಿ ಕೊಟ್ಟರೆ ಅಷ್ಟು ಸರಿಯಾಗಿರುವುದಿಲ್ಲ. ಇದನ್ನು ಸರಿಪಡಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಬೆಂಗಳೂರಿನಲ್ಲಿ 5 ಚಿತಾಗಾರಗಳಿವೆಯೆಂದು ಹೇಳಿದ್ದಾರೆ. ಈ ಐದು ಚಿತಾಗಾರಗಳು ಯಾವುವು? ಎಂದು ನನಗೆ ಗೊತ್ತಾಗಬೇಕು. ಎರಡನೆಯದಾಗಿ, ಈ ಚಿತಾಗಾರಗಳ ಬಗ್ಗೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯೇನಾದರೂ ಕ್ರಮ ಕೈಗೊಂಡಿದೆಯೇ? ಮೂರನೆಯದಾಗಿ, ಬೆಂಗಳೂರಿನಲ್ಲಿ ಚಿತಾಗಾರಗಳು It is a burning problem. ಯಾರೂ ಕೂಡ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ, ಹಗುರವಾಗಿ ಎಷ್ಟರಮಟ್ಟಿಗೆ ಇದನ್ನು ತೆಗೆದುಕೊಳ್ಳುತ್ತಾರೆಂದರೆ ಒಂದು ಚಿತಾಗಾರ ಕೆಟ್ಟು ಹೋದಾಗ ಪತ್ರಿಕೆಯಲ್ಲಿ ಜಾಹೀರಾತು ಕೊಡುತ್ತಾರೆ. ಏನೆಂದರೆ, Crematorium closed for repairs; Public are requested to co-operate. ದುರಸ್ಥಿಯಾದ ಬಳಿಕ ಹೇಳುತ್ತಾರೆ. Crematorum is open; All are welcome. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ? ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದೇನಾದರೂ ಕ್ರಮ ತೆಗೆದುಕೊಳ್ಳುತ್ತೀದ್ದೀರಾ? ಇದರ ಬಗ್ಗೆ ಉನ್ನತ ಮಟ್ಟದ ಸಮಿತಿಯನ್ನೇನಾದರೂ ರಚನೆ ಮಾಡುತ್ತೀರಾ? ಮತ್ತು ಜನರ ವಾಸಸ್ಥಾನಗಳ ನಡುವೆ ಇರತಕ್ಕಂಥ ಚಿತಾಗಾರಗಳನ್ನು ಕೂಡಲೇ ಬೇರೆಡೆಗೆ ವರ್ಗಾಯಿಸುತ್ತೀರಾ? ಇವುಗಳಿಗೆ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸ್ವಾಮಿ, ಆಯಾ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಿದರೆ ಯಾವುದೇ ತಾಪತ್ರಯವಿರುವುದಿಲ್ಲ. ಕೆಲಸ ಮಾಡದಿದ್ದಾಗ ಅಂತಹ ಸಂದರ್ಭಗಳಲ್ಲಿ ಮಧ್ಯೆ ಪ್ರವೇಶ ಮಾಡಿದರೆ ಆಗ ಹಸ್ತಕ್ಷೇಪವಾಗಲು ಪ್ರಾರಂಭವಾಗುತ್ತದೆ. ಕಾರ್ಪೊರೇಷನ್ನಲ್ಲಿ ಅವರ ಕೆಲಸವನ್ನು ಇನ್ನೊಬ್ಬರು ಮಾಡದಂತೆ ನೋಡಿಕೊಂಡರೆ ಪ್ರತಿಯೊಂದು ವಿಚಾರಕ್ಕೂ ಆಗ ರಾಜಕೀಯ ಮುಖಂಡರುಗಳು ವಿಧಾನಸಭೆಯಿಂದ ಹಸ್ತಕ್ಷೇಪ ಮಾಡುವಂಥ ಅವಶ್ಯಕತೆಯಿರುವುದಿಲ್ಲ. ನೀವು ಕೇಳಿರುವಂಥ ಪ್ರಶ್ನೆ ಬಹಳ ಅತ್ಯುತ್ತಮವಾದುದಾಗಿದೆ. ಆ ರೀತಿ ಪತ್ರಿಕೆಗಳಲ್ಲಿ ಜಾಹೀರಾತು ಹಾಕುತ್ತಾರೆಂದು ಹೇಳಿದಿರಿ. ಇದರ ಬಗ್ಗೆ ವಿವರಣೆ ಕೊಡಲು ಸಮಯ ಕಡಿಮೆ ಇರುವುದರಿಂದ ತಾವು ಕೇಳಿರುವ ಐದು ಚಿತಾಗಾರಗಳ ಬಗ್ಗೆ ಹೇಳುತ್ತೇನೆ. ಅವು ಯಾವುವೆಂದರೆ, ವಿಲ್ಸನ್ ಗಾರ್ಡನ್ನಲ್ಲಿರುವ ಚಿತಾಗಾರ, ಹರಿಶ್ಚಂದ್ರ ಘಾಟ್ನಲ್ಲಿರುವ ಚಿತಾಗಾರ, ಪಾದರಾಯನಪುರದಲ್ಲಿರುವ ಚಿತಾಗಾರ, ಕಲ್ಲಹಳ್ಳಿಯಲ್ಲಿರುವ ಚಿತಾಗಾರ, ಐದನೆಯದು, ಬನಶಂಕರಿಯಲ್ಲಿದ್ದು, ಇದು ಇನ್ನೂ ನಿರ್ಮಾಣದ ಹಂತರದಲ್ಲಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಅದು ನಿರ್ಮಾಣದಲ್ಲಿಲ್ಲ, ಇದರ ಬಗ್ಗೆ ಮೊನ್ನೆ ರೆಸಲ್ಯೂಷನ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರದಿಂದ ಉತ್ತರವನ್ನು ಕೊಡಬೇಕಾದರೆ ತುಂಬಾ ಜವಾಬ್ದಾರಿಯಿಂದ ಕೊಡಬೇಕಾಗುತ್ತದೆ. 5 ಚಿತಾಗಾರಗಳಿವೆ ಎಂದು ಹೇಳಿದ್ದಾರೆ. ವಾಸ್ತವಿಕವಾಗಿ ನಾಲ್ಕೇ ಇದ್ದರೆ ಅವರು ಈ ರೀತಿ ಉತ್ತರವನ್ನು ಕೊಟ್ಟರೆ ಅದು ಬಹುಶಃ ಪ್ರಿವಿಲೇಜ್ ಆಗುತ್ತದೆ. ತಾವು ಕೊಡುವ ಅಂಕಿಅಂಶಗಳ ಮೇಲೆ ನಾವು ಯಾವ ರೀತಿಯಲ್ಲಿ ಚರ್ಚೆ ಮಾಡಬೇಕು? ಮುಖ್ಯಮಂತ್ರಿಗಳಿಗೆ ಮಾಹಿತಿಯನ್ನು ಕೊಡುವಾಗಲೇ ಅಧಿಕಾರಿಗಳು ಗಂಭೀರವಾಗಿ ಪರಿಶೀಲನೆ ಮಾಡುವುದಿಲ್ಲವೆಂದರೆ, ವಾಸ್ತವಿಕವಾದ ಅಂಶವನ್ನು ಸದನಕ್ಕೆ ಕೊಡುವುದಿಲ್ಲವೆಂದರೆ ನಾವು ಇದರ ಬಗ್ಗೆ ಚರ್ಚೆ ಮಾಡುವುದಾದರೂ ಸಹ ಏಕೆ?

ಶ್ರೀ ಹೆಚ್.ಡಿ. ದೇವೇಗೌಡ : ಒಂದು ನಿರ್ಮಾಣದ ಹಂತದಲ್ಲಿದೆ ಎಂದು ಮಾಹಿತಿ ಕೊಟ್ಟಿದ್ದಾರೆ. ಅದು ಯಾವ ಹಂತದಲ್ಲಿದೆ ಎಂಬುದು ನನಗೆ ಗೊತ್ತಿಲ್ಲ.

ನನಗೆ ಬಂದಿರುವ ವರದಿಯನ್ನು ತಮ್ಮ ಮುಂದಿಟ್ಟಿದ್ದೇನೆ. ಸಭೆಯ ಮುಂದೆ ಇಟ್ಟಿದ್ದೇನೆ. If any wrong information has been given by any officer, ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ. ಆ ಚಿತಾಗಾರವು ಯಾವ ಹಂತದಲ್ಲಿ ನಿರ್ಮಾಣವಾಗುತ್ತಿದೆ ಎಂಬುದನ್ನು ನಾನಿನ್ನು ನೋಡಲು ಸಮಯ ಸಿಗದೆ ಸಾಧ್ಯವಾಗಿಲ್ಲ.

ಶ್ರೀ ಎನ್. ಸುರೇಶ್ ಕುಮಾರ್ : ನಾನು ಉನ್ನತ ಸಮಿತಿಯ ಬಗ್ಗೆ ಹೇಳಿದ್ದೇನೆ ಮತ್ತು ಮಾಲಿನ್ಯ ಮಂಡಳಿಯಿಂದ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರ?

ಶ್ರೀ ಹೆಚ್.ಡಿ. ದೇವೇಗೌಡ : ಅಲ್ಲಿ ಈಗ ಹೊರಸೂಸುವ ವಾಸನೆಯನ್ನು ನಿವಾರಿಸಲು ಆಯಿಲ್ ಫಿಲ್ಟರ್‌ಗಳನ್ನು ಪ್ರಯೋಗಿಕವಾಗಿ ಅಳವಡಿಸಲಾಗಿದೆ. ಆ ವ್ಯವಸ್ಥೆಯು ಯಶಸ್ವಿಯಾದರೆ ಎಲ್ಲಾ ಚಿತಾಗಾರಗಳಿಗೂ ಇದನ್ನು ಜೋಡಿಸುತ್ತೇವೆಂದು ವರದಿ ಇದೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ನಿಮ್ಮನ್ನು ಸಹ ಕೂರಿಸಿಕೊಂಡು ಚರ್ಚೆ ಮಾಡುತ್ತೇವೆ. ತಾವು ಉನ್ನತ ಸಮಿತಿಯ ಬಗ್ಗೆ ಹೇಳಿದ್ದೀರಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಶ್ರೀನಿವಾಸ್ : ಒಂದು ವಾಹನದಲ್ಲಿ ಹೊಗೆ ಹೋಗುತ್ತಿದ್ದರೆ ಸಾವಿರ ರೂಪಾಯಿ ದಂಡ ವಿಧಿಸುತ್ತೀರಿ, ಆದರೆ ಇಲ್ಲಿ ಏನು ಆಗುವುದಿಲ್ಲವೆ?

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆ**

11 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕಳೆದ ಐದು ವರ್ಷಗಳಲ್ಲಿ ಎಷ್ಟು ಜನ ಮಧ್ಯಮ ವರ್ಗದ ಮತ್ತು ಕೆಳವರ್ಗದ ಜನರಿಗೆ ನಿವೇಶನಗಳನ್ನು ಹಂಚಿದ್ದಾರೆ?*

*ಆ) ನಿವೇಶನಗಳನ್ನು ಹಂಚಲು ಕಳೆದ ಐದು ವರ್ಷಗಳಿಂದ ಬೆಂಗಳೂರಿನ ಸುತ್ತಮುತ್ತ ಎಷ್ಟು ಎಕರೆ ಜಮೀನನ್ನು ಈ ಪ್ರಾಧಿಕಾರದವರು ವಶಕ್ಕೆ ತೆಗೆದುಕೊಂಡಿದ್ದಾರೆ?*

*ಇ) ಈಗಾಗಲೇ ಸೈಟು ನೀಡಿ, ಆ ಫಲಾನುಭವಿಗಳಿಂದ ಹಣ ಪಡೆದು ಸೈಟುಗಳನ್ನು ಹಂಚದೇ ಇರುವ ಸಂಖ್ಯೆ ಎಷ್ಟು?*

*ಈ) ಈವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸೈಟುಗಳನ್ನು ಕೇಳಿ ಅರ್ಜಿ ಹಾಕಿರುವ ಫಲಾನುಭವಿಗಳ ಸಂಖ್ಯೆ ಎಷ್ಟು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಿವೇಶನಗಳ ಹಂಚಿಕೆ) ನಿಯಮಾವಳಿಗಳು 1994ರ ಪ್ರಕಾರ ವಿವಿಧ ವರ್ಗದ ಅರ್ಜಿದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಯಾವುದೇ ಯೋಜನೆಯಲ್ಲಿ ಪ್ರತಿಶತ 30ರಷ್ಟು ನಿವೇಶನ ಪ್ರದೇಶವನ್ನು ರೂ. 6,000ಕ್ಕಿಂತ ಕಡಿಮೆ ವರಮಾನವಿರುವ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಹಂಚಿಕೆ ಮಾಡಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಒಟ್ಟು 5355 ನಿವೇಶನಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ 2212 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಆ) ಒಟ್ಟು 752 ಎಕರೆ 17 ಗುಂಟೆ ಜಮೀನನ್ನು ಪ್ರಾಧಿಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ.